**ಸಾಕ್ಷಿದಾರರನ್ನು ಕರೆಯಿಸಲಾಯಿತು** **ಪ್ರಮಾಣ ವಚನ ಬೋಧಿಸಲಾಯಿತು**

ದಿನಾಂಕಃ **11.11.2025**

**ಪಾಟೀ ಸವಾಲು:-** ಶ್ರೀ ಜಿಎನ್.ಆರ್ ವಾದಿಯ ಪರ ವಕೀಲರಿಂದ

ವಾದಿಗಳು ನಾವೇ ಸ್ವಾಧೀನ ಇದ್ದೇವೆ ಎಂದು ದಾವೆ ಹಾಕಿರುತ್ತಾರೆ. ದಾವೆಯನ್ನು 7 ಐಟಂಗಳಿಗೆ ಸಂಬಂಧಪಟ್ಟಂತೆ ಸಲ್ಲಿಸಿರುತ್ತಾರೆ. ದಾವಾ ಸ್ವತ್ತುಗಳು ಮೂಲತಃ ನಂಜಮ್ಮರವರಿಗೆ ಸೇರಿದ್ದು, ನಂತರ ಶಿವಮ್ಮ, ನಂತರ ರಾಮೆಗೌಡ, ನಂತರ ದಯಾನಂದ ನಿರ್ಮಲ, ರಂಗಮ್ಮ ರಾಧಮ್ಮ ರವರಿಗೆ ಸೇರಿದಾಗಿರುತ್ತದೆ. ನನ್ನ ತಾಯಿಯ ಮುತ್ತಾಜಿಯ ಹೆಸರು ಅಂದರೆ ನಂಜಮ್ಮ ತಾಯಿಯ ಹೆಸರು ಗೊತ್ತಿಲ್ಲ. ನಂಜಮ್ಮನ ತಾಯಿ ಹೆಸರು ದ್ಯಾವಮ್ಮ ಎಂದರೆ ಸರಿ. ದಾವ್ಯಮ್ಮರವರಿಗೆ ಒಬ್ಬರೇ ಮಗಳು ನಂಜಮ್ಮ ಎಂದರೆ ಸರಿ. ನಂಜಮ್ಮರವರಿಗೆ ಐದು ಜನ ಹೆಣ್ಣು ಮಕ್ಕಳು ಎಂದರೆ ಸರಿ. ಅವರುಗಳೆಂದರೆ 1ನೇ ವಾದಿ ರಂಗಮ್ಮ, ಶಿವಮ್ಮ, 2ನೇ ವಾದಿ ಶಾರದಮ್ಮ, ನೀಲಮ್ಮ, ಸಾವಿತ್ರಮ್ಮ ಉಃ ಪಾರ್ವತಮ್ಮ ಎಂದರೆ ಸರಿ. ಪ್ರತಿವಾದಿಗಳು ನೀಲಮ್ಮನ ಮಗಳ ಮಕ್ಕಳು ಎಂದರೆ ಸರಿ. ದ್ಯಾವಮ್ಮರವರಿಗೆ ಎಷ್ಟು ಸ್ವತ್ತುಗಳು ಯಾವ ಯಾವ ಸ್ಥನಂಗಳಲ್ಲಿ ಇದ್ದವು ಎಂದು ನನಗೆ ಗೊತ್ತಿಲ್ಲ.

ನಂಜಮ್ಮನ ತಾಯಿ ದ್ಯಾವಮ್ಮರವರು ಕೆಲವು ಸ್ವತ್ತುಗಳನ್ನು ಕ್ರಯಕ್ಕೆ ಕೊಂಡುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ದ್ಯಾವಮ್ಮರವರಿಗೆ ಅವರ ತಾಯಿ ಮನೆಕಡೆಯಿಂದ ಪಾಲುಪಟ್ಟಿ ಮೂಲಕ ಕೆಲವು ಸ್ವತ್ತುಗಳು ಬಂದಿದ್ದವು ಎಂದರೆ ನನಗೆ ಗೊತ್ತಿಲ್ಲ. ದಿಃ 29.10.1979 ರಲ್ಲಿ ನೊಂದಾಯಿತ ಮರಣ ಶಾಸನ ಮೂಲಕ ದ್ಯಾವಮ್ಮರವರು ಕೆಲವು ಸ್ವತ್ತುಗಳನ್ನು ಅವರ ಮಗಳಾದ ನಂಜಮ್ಮರವರಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಇನ್ನು ಕೆಲವು ಸ್ವತ್ತುಗಳನ್ನು ದಿಃ 18.12.1980 ರಲ್ಲಿ ಮರಣ ಶಾಸನ ಮೂಲಕ ದ್ಯಾವಮ್ಮರವರು ಅವರ ಮಗಳಾದ ನಂಜಮ್ಮರವರಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಂಜಮ್ಮರವರು ತಮ್ಮ ಐದು ಜನ ಹೆಣ್ಣು ಮಕ್ಕಳಿಗೂ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ನಂತರ ನಂಜಮ್ಮನ ಮಕ್ಕಳು ಅವರ ಗಂಡನ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿ. 1ನೇ ವಾದಿ ರಂಗಮ್ಮ ಹಾಗೂ 2ನೇ ವಾದಿ ಶಾರದಮ್ಮರವರಿಗೆ ನಂಜಮ್ಮರವರ ಯೋಗ ಕ್ಷೇಮ ನೋಡಿಕೊಂಡಿದ್ದರಿಂದ ದಿಃ 22.11.2004 ರಂದು ನೊಂದಾಯಿತ ಮರಣ ಶಾಸನ ಮೂಲಕ ದಾವಾ ಸ್ವತ್ತುಗಳನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ದಿಃ 10.07.2004 ರಲ್ಲಿ ಪಂಚಾಯಿತಿಗೆ ಕರೆದು ನಂಜಮ್ಮರವರು ತಮ್ಮ ಐದು ಜನ ಹೆಣ್ಣು ಮಕ್ಕಳಿಗೆ ಸಮವಾಗಿ ಪಂಚಾಯಿತಿ ಪಾರಿಕತ್ತು ಮಾಡಿಕೊಟ್ಟಿರುತ್ತಾರೆ ಎಂದು ಹೇಳಿದರು. ಸದರಿ ಪಂಚಾಯಿತಿ ಪಾರಿಕತ್ತನ್ನು ನಾನು ನೋಡಿ ರುವುದಿಲ್ಲ. ಸದರಿ ಪಂಚಾಯಿತಿ ಪಾರಿಕತ್ತನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿಯು ನಕಲು

ಪ್ರತಿಯನ್ನು ಸಲ್ಲಿಸಿದ್ದೇವೆ ಎಂದು ಹೇಳಿದರು. ಅಸಲು ಪತ್ರವನ್ನು ಶಾರದಮ್ಮ ರವರು ಪಡೆದುಕೊಂಡು ಹೋಗಿದ್ದು ಅವರ ಬಳಿಯೇ ಉಳಿದುಕೊಂಡಿರುತ್ತದೆ. ಪಂಚಾಯಿತಿ ಪಾರಿಕತ್ತು ಆದಾಗ ನನಗೆ 4 ವರ್ಷ. ಶಾರದಮ್ಮ ರವರು ಪಂಚಾಯಿತಿ ಪಾರಿಕತ್ತನ್ನು ತೆಗೆದುಕೊಂಡು ಹೋಗಿರುತ್ತಾರೆ ಎಂದು ನನ್ನ ತಂದೆ ಹಾಗೂ ತಾತ ನನಗೆ ಹೇಳಿರುತ್ತಾರೆ.

ಆರ್.ಎ 40/2007-08 ರಂತೆ ಉಪವಿಭಾಗಾಧಿಕಾರಿಯ ಮುಂದೆ ಪ್ರತಿವಾದಿಗಳ ಹೆಸರಿಗೆ ಬಂದಿದ್ದ ಖಾತೆಯನ್ನು ವಾದಿಗಳು ಪ್ರಶ್ನಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಎಂ.ಆರ್ 16-2006-07 ನ್ನು ಉಪವಿಭಾಗಾಧಿಕಾರಿಯು ರದ್ದು ಮಾಡಿರುತ್ತಾರೆ ಎಂದರೆ ಸಾಕ್ಷಿಯು ಆ ರೀತಿ ರದ್ದು ಮಾಡಿಲ್ಲ ಎಂದು ಹೇಳಿದರು. ಆ ರೀತಿ ರದ್ದು ಮಾಡಿರುವ ಬಗ್ಗೆ ಗೊತ್ತ ಎಂದರೆ ಸಾಕ್ಷಿಯು ಆ ರೀತಿ ರದ್ದು ಮಾಡಿಲ್ಲ ಎಂದು ಹೇಳಿದರು. 2004 ರಲ್ಲಿ ಪಂಚಾಯಿತಿ ಪಾರಿಕತ್ತು ಆಗಿದೆ ಎಂದು ಹೇಳಿದ್ದು, ಅದು ಯಾರ ಯಾರ ನಡುವೆ ಆಗಿತ್ತು ಎಂದರೆ ಸಾಕ್ಷಿಯು ಐದು ಜನ ಹೆಣ್ಣು ಮಕ್ಕಳು, ನನ್ನ ತಂದೆ-ತಾಯಿ ಹಾಗೂ ಊರಿನ ಗ್ರಾಮಸ್ಥರು ಸೇರಿದ್ದರು.

ಅಸಲು ದಾವೆ 407/2003 ರಲ್ಲಿ ಸಾವಿತ್ರಮ್ಮರವರ ಮಗ ದಿನೇಶ್ ರವರು ಒಂದು ದಾವೆ ಹಾಕಿದ್ದ ಎಂದರೆ ಸರಿ. ಆ ದಾವೆಯಲ್ಲಿ ಇನ್ನು ಭಾಗವಾಗಿಲ್ಲ ಅದ್ದರಿಂದ ಒಂದು ಭಾಗ ಕೊಡಿ ಎಂದು ಕೇಸ್ ಹಾಕಿದ್ದರು ಎಂದರೆ ಸಾಕ್ಷಿಯು 2003 ರಲ್ಲಿ ಕೇಸ್ ಹಾಕಿದ್ದು, 2004 ರಲ್ಲಿ ಪಂಚಾಯಿತಿ ಪಾರಿಕತ್ತು ಆದ ನಂತರ ಸದರಿ ದಾವೆಯನ್ನು ವಾಪಸ್ಸು ಪಡೆದಿರುತ್ತಾರೆ ಎಂದು ಹೇಳಿದರು. ಆ ದಾವೆಯನ್ನು ಯಾವ ರೀತಿ ವಾಪಾಸ್ಸು ಪಡೆದಿರುತ್ತಾರೆ ಎಂದು ಗೊತ್ತಾ ಎಂದರೆ ಸಾಕ್ಷಿಯು ಪಂಚಾಯಿತಿ ಪಾರಿಕತ್ತು ಮಾಡಿಕೊಂಡಿದ್ದರಿಂದ ವಾಪಾಸ್ಸು ಪಡೆದಿರುತ್ತಾರೆ. ನಾನು ಹೇಳಿದಂತೆ ಪಂಚಾಯಿತಿ ಪಾರಿಕತ್ತು ಆಗಿದೆ ಎಂದು ಕೇಸ್ ನ್ನು ವಾಪಾಸ್ಸು ಪಡೆದಿರುವುದಿಲ್ಲ ಅದರ ಬದಲು ಮೆಮೋ ಹಾಕಿ ಕೇಸ್ ನ್ನು ವಾಪಾಸ್ಸು ಪಡೆದಿದ್ದಾರೆ ಎಂದರೆ ಸರಿಯಲ್ಲ.

ಅಸಲು ದಾವೆ 232/2010 ರಂತೆ ನನ್ನ ಅಜ್ಜಿಯ ತಂಗಿ ನೀಲಮ್ಮ, ಸಾವಿತ್ರಮ್ಮರವರ ಮಗ ದಿನೇಶ್ ರವರು ಘೋಷಣೆ ದಾವೆಯನ್ನು ಸದರಿ ವಾದಿಗಳ ವಿರುದ್ಧ ಹಾಕಿದ್ದರು ಎಂದರೆ ಸರಿ. ಸದರಿ ಕೇಸ್ ಯಾವ ಉದ್ದೇಶಕ್ಕೆ ಹಾಕಿದ್ದರು ಎಂದು ನನಗೆ ಗೊತ್ತಿಲ್ಲ. ಈ ಹಿಂದೆ ಪಾಲುಪಟ್ಟಿಯಾಗಿದ್ದು ಅದರಂತೆ ಘೋಷಣೆ ಮಾಡಿ ಎಂದು ದಾವ ಹಾಕಿದ್ದರು ಎಂದರೆ ಸರಿ. ಸದರಿ ದಾವೆ ಎಲ್ಲಾ ವಿಚಾರಣೆ ಆದಾ ನಂತರ ವಜಾ ಆಗಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ವಾದಿಗಳಿಗೆ ವಿಲ್ ಆಗಿದ್ದರು ಸಹ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಒಂದಾರಮೇಲೆ ಒಂದು ಕೇಸ್ ಹಾಕಿಕೊಂಡು ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀಸವಾಲಿಗೆ ಸಮಯ ಕೇಳಿದ್ದು ಮುಂದೂಡಲಾಯಿತು**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.,

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ